ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂ:ಕ.ಸಂ.ವಿ.1/ಹಿ.ಗ್ರ.ಪ:2017–18 ದಿನಾಂಕ:30.01.2018

ಪ್ರಕಟಣೆಗಾಗಿ

ಗೆ,

ಮಾನ್ಯ ಸಂಪಾದಕರು

-------------

-------------

## 'ಸಂಸ್ಕೃತ ಗ್ರಂಥ ಪುರಸ್ಕಾರ 2016'

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣ ಮತ್ತು ಸಂಶೋಧನೆಗಳ ಬಲವರ್ಧನೆಗಾಗಿ ರಾಜ್ಯ ಸರ್ಕಾರವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ವಿಶ್ವವಿದ್ಯಾಲಯವು ಪದವಿಗಳನ್ನು ನೀಡುವುದರ ಜೊತೆಗೆ ಸಂಸ್ಕೃತ ಭಾಷೆಯ ಪ್ರಸಾರ–ಅಭಿವೃದ್ಧಿಗಳ ದೃಷ್ಟಿಯಿಂದ ಹಲವು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಗ್ರಂಥಪುರಸ್ಕಾರ ಯೋಜನೆಯೂ ಒಂದು.

ಕರ್ನಾಟಕ ರಾಜ್ಯದಲ್ಲಿ ಸಂಸ್ಕೃತ ಸಾಹಿತ್ಯ ರಚನೆ/ಗ್ರಂಥರಚನೆ ಮತ್ತು ಪ್ರಕಾಶನದ ಉದ್ಯಮವು ಬಹಳ ದೀರ್ಘ ಇತಿಹಾಸವನ್ನು ಹೊಂದಿದೆ. ಇಂದಿಗೂ ಅನೇಕ ವಿದ್ವಾಂಸರು ಸಂಸ್ಕೃತ ವಾಙ್ಮಯದ ಗದ್ಯ, ಪದ್ಯ ಇತ್ಯಾದಿ ಪ್ರಕಾರಗಳ ರಚನೆಯಲ್ಲಿ ತೊಡಗಿದ್ದಾರೆ. ಅನೇಕ ಯುವಪ್ರತಿಭೆಗಳೂ ಇಂಥ ಗ್ರಂಥರಚನೆಯಲ್ಲಿ ತಮ್ಮ ಕೌಶಲ್ಯ ತೋರಿಸುತ್ತಿದ್ದಾರೆ. ಪ್ರತಿವರ್ಷ ಸಂಸ್ಕೃತವಾಙ್ಮಯಪ್ರಪಂಚಕ್ಕೆ ಕರ್ನಾಟಕ ರಾಜ್ಯದ ಗ್ರಂಥಕರ್ತೃಗಳ ಕೊಡುಗೆಯೂ ಗಣನೀಯವಾಗಿದೆ. ಇಂತಹ ಸೃಜನಶೀಲರಚನೆಗಳಿಗೆ ರಾಜ್ಯಮಟ್ಟದಲ್ಲಿ ಯಾವುದೇ ಪ್ರೋತ್ಸಾಹ ಪುರಸ್ಕಾರಗಳು ದೊರಕುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010–11ನೇ ಸಾಲಿನಿಂದ "ಗ್ರಂಥಪುರಸ್ಕಾರ ಯೋಜನೆ"ಯನ್ನು ಆರಂಭಿಸಿ, ಕಳೆದ "ಐದು" ಸಾಲಿನಿಂದ ಸಮಕಾಲೀನ ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರ ನೀಡಿದೆ. ಪುರಸ್ಕಾರವು ಒಂದು ಪ್ರಶಸ್ತಿ ಫಲಕ, ಶಾಲು ಮತ್ತು 10,000/– ರೂ.ಗಳೂ ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ 2016ನೇ ಸಾಲಿನ ಗ್ರಂಥಪುರಸ್ಕಾರಕ್ಕೆ ಅರ್ಹ ಆಗ್ರಂಥಗಳನ್ನು ಆಹ್ವಾನಿಸಲಾಗಿದೆ. ಲೇಖಕರು ತಮ್ಮ ಕೃತಿಗಳನ್ನು 2018ಫೆಬ್ರವರಿ28ರೊಳಗೆ **ಪ್ರಸಾರಾಂಗ,ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ** ಕಳುಹಿಸಲು ಕೋರಿದೆ. ಕಳೆದ 2013ನೇ ಸಾಲಿನ ಇಸ್ವಿಯಿಂದ ಐದು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುವುದು.

ವಿಶ್ವವಿದ್ಯಾಲಯದ ಅಂತರ್ಜಾಲತಾಣ www.ksu.ac.inನಲ್ಲಿ 'ಸಂಸ್ಕೃತ ಗ್ರಂಥ ಪುರಸ್ಕಾರ ಯೋಜನೆ'ಯ ಸಂಪೂರ್ಣ ವಿವರ ಲಭ್ಯವಿದೆ.

**ಪುರಸ್ಕಾರಕ್ಕೆ ಅರ್ಹವಾದ ವಾಙ್ಮಯ ಪ್ರಕಾರಗಳು**

1. ಕಾದಂಬರೀ/ಕಥಾ ಸಾಹಿತ್ಯ
2. ಗದ್ಯ/ಪದ್ಯ/ಕಾವ್ಯ. ನಾಟಕ ಸಾಹಿತ್ಯ
3. ಗ್ರಂಥಸಂಪಾದನ ಸಾಹಿತ್ಯ
4. ಪ್ರಬಂಧ ವಿಮರ್ಶನ ಸಾಹಿತ್ಯ ವಿಜ್ಞಾನ ಸಾಹಿತ್ಯ
5. ಇತರ ಭಾಷೆಗಳಿಂದ ಸಂಸ್ಕೃತಕ್ಕೆ ಅನುವಾದ
6. ಶಾಸ್ತ್ರೀಯ ಗ್ರಂಥದ ಕನ್ನಡ ಅನುವಾದ
7. ಸಂಸ್ಕೃತದ ಅತ್ಯುತ್ತಮ ಸಂಶೋಧನಾ ಪ್ರಬಂಧ (ಪಿಹೆಚ್‌ಡಿ) ವಿದ್ಯಾವಾರಿಧಿ
8. ಅತ್ಯುತ್ತಮ ಇಂಡಾಲಜಿ ವಿಮರ್ಶ ಗ್ರಂಥ ಅಥವಾ ಲೇಖನ ಸಂಗ್ರಹ
9. ಸಂಶೋಧನಾ ವಿದ್ಯಾರ್ಥಿಗಳ ಅತ್ಯುತ್ತಮ ಸಂಶೋಧನ ಲೇಖನ (ಸುದೀರ್ಘ-50 ಪುಟಗಳು)
10. ಶಿಕ್ಷಕರ ಅತ್ಯುತ್ತಮ ಸಂಶೋಧನಾ ಲೇಖನ (80-100 ಪುಟಗಳು)

ಈ ಅರ್ಹ ಗ್ರಂಥಗಳನ್ನು ವಿದ್ವಾಂಸರು ಅಥವಾ ಯಾವುದೇ ಸಂಸ್ಥೆಯ ಪದಾಧಿಕಾರಿಗಳು ನಾಮ ನಿರ್ದೇಶನ ಮಾಡಿ ಗ್ರಂಥದ ಮೂರು ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸುವುದು.

ಹೆಚ್ಚಿನ ಮಾಹಿತಿಗಾಗಿ
ಡಾ.ಸಂತೋಷ ಹಾನಗಲ್,ಉಪನಿರ್ದೇಶಕರು ಪ್ರಸಾರಾಂಗ,ಕಸಂವಿ.ವಿ,ಬೆ-18.
ನಂ;09535725499.
ಡಾ.ಬಿ.ಗೋವಿಂದ ಸಹಾಯಕ ನಿರ್ದೇಶಕರು ಪ್ರಸಾರಾಂಗ,ಕಸಂವಿ,ಬೆಂ-18.
ನಂ:09632079891
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ ಬೆಂಗಳೂರು-18
ಇ-ಮೇಲ್:-karnatakasankrituniversity@gmail.com
ದೂರವಾಣಿ:- 080 26701303, 26705387, ಮೊಬೈಲ್ ನಂ: 9632079891
ಈ ಯೋಜನೆಯ ವಿವರಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತೇನೆ.

sd/-
**ಕುಲಸಚಿವರು**